ಎರಡು ದಿನ ಆ ಕಾರ್ಯಕ್ರಮವನ್ನು ನಡೆಸಿಕೊಡುವ ನಿರೂಪಕನಿರ್ದೇಶಕ (ಹಿಂದಿ ಆವೃತ್ತಿಯಲ್ಲಿ) ಪ್ರತಿವಾರವೂ ಮೂರ್ನಾಲ್ಕು ಕೋಟಿ ರೂಪಾಯಿ ಪಡೆಯುತ್ತಾನಂತೆ. ಇತರ ಭಾಷೆಗಳ ಈ ಕಾರ್ಯಕ್ರಮದಲ್ಲಿ ನಿರೂಪಕರು ಆಗಾಗ್ಗೆ ಬದಲಾದರೂ ಕನ್ನಡ ಆವೃತ್ತಿಯಲ್ಲಿ ಸುದೀಪ್ ಒಬ್ಬರೇ ಕಳೆದ ಎಂಟು ವರ್ಷಗಳಿಂದ ನಿರೂಪಕರಾಗಿದ್ದಾರೆ. ಇದಕ್ಕೆ ಕಾರಣ ಅವರ ಅಸಾಧಾರಣ ಹಾಸ್ಯಪ್ರಜ್ಞೆ, ಹಾಗೂ ಸುಸಂಸ್ಕೃತ ನಡವಳಿಕೆ ಎಂದು ತೋರುತ್ತದೆ.

ನಿಜ; ಬಿಗ್ ಬಾಸ್‌ನಂತಹ ಕಾರ್ಯಕ್ರಮಗಳು, ಮನೋವಿಜ್ಞಾನಿಗಳು ವ್ಯಾಖ್ಯಾನಿಸುವಂತೆ, ಮನುಷ್ಯರೆಲ್ಲರಲ್ಲಿಯೂ ಭಿನ್ನ ಪ್ರಮಾಣಗಳಲ್ಲಿ ಇರುವ ಸ್ಯಾಡಿಸ್ಟಿಕ್ ಕಾಮನೆಯನ್ನು ತೃಪ್ತಿಗೊಳಿಸುತ್ತವೆ. (ಎಂದರೆ, ಮತ್ತೊಬ್ಬರ ಮೇಲಾಗುವ ಹಿಂಸೆವೇದನೆ ಇವುಗಳಿಂದ ಮಾನಸಿಕ ತೃಪ್ತಿ ಪಡೆಯುವುದು; ಸುಪ್ತಪ್ರಜ್ಞೆಯಲ್ಲಿ ಅಡಗಿರುವ ಹಿಂಸಾರತಿಯ ಕಾಮನೆ.) ಖ್ಯಾತ ನಟ ನಟಿಯರು, ಕ್ರೀಡಾಳುಗಳು ಹಾಗೂ ಕಲಾವಿದರು ಬಿಗ್ ಬಾಸ್ ಮನೆಯಲ್ಲಿ ಕಷ್ಟಪಡುವುದನ್ನು, ಹಸಿವು/ನೀರಡಿಕೆಗಳಿಂದ ನರಳುವುದನ್ನು, ಜಗಳವಾಡುವುದನ್ನು ನೋಡಿದಾಗ ಪ್ರೇಕ್ಷಕರಿಗೆ ಒಂದು ಬಗೆಯ ವಿಕೃತ ಸಂತಸ ಸಮಾಧಾನಗಳು (vicarious pleasure) ಆಗುತ್ತವೆ. ಇಂತಹ ಸ್ಯಾಡಿಸ್ಟ್ ಕಾಮನೆಗಳನ್ನು ಬಿಗ್ ಬಾಸ್‌ನಂತಹ ದೃಶ್ಯ ರೂಪಕಗಳು ಹಣದ ರೂಪಕ್ಕೆ ಪರಿವರ್ತಿಸಿಕೊಳ್ಳುತ್ತವೆ.

ಪ್ರಾಯಃ ಈ ಕಾರಣದಿಂದಲೇ, ಬಿಗ್ ಬಾಸ್ ಸ್ಪರ್ಧಿಗಳಿಗೆ ಕೊಡುವ ಕೆಲವು 'ಟಾಸ್ಕ್'ಗಳಾದರೂ ಹಿಂಸೆಗೆ ಅವಕಾಶವನ್ನು ಕೊಡುತ್ತವೆ. ಒಬ್ಬರ ಬಳಿ ಇರುವ ವಸ್ತುಗಳನ್ನು ಮತ್ತೊಬ್ಬರು ಕಿತ್ತುಕೊಳ್ಳಬಹುದು ಎಂದಾಗ, ಅಥವಾ ಒಂದೇ ವಸ್ತುವನ್ನು ಪಡೆಯಲು ಹತ್ತು ಜನರಿಗೆ ಅವಕಾಶವಿದೆ ಎಂದಾಗ, ಅವರು ಪರಸ್ಪರ ಕೈಕೈ ಮಿಲಾಯಿಸುವುದು, ಒಬ್ಬರನ್ನೊಬ್ಬರು ಎಳೆದಾಡುವುದು ಆಶ್ಚರ್ಯಕರವೇನಲ್ಲ. (ಅಂತರ್ಜಾಲ ಮಾಹಿತಿಯನ್ನು ನಂಬಬಹುದಾದರೆ) ಹಿಂದಿ ಬಿಗ್ ಬಾಸ್ ಕಾರ್ಯಕ್ರಮದಲ್ಲಿ ಹಿಂಸ್ರ ಟಾಸ್ಕ್‌ಗಳು ಹೆಚ್ಚಿದ್ದು, ಆ ಕಾರಣದಿಂದ ಹೊಡೆದಾಟಗಳು ಅತಿಗೆ ಹೋಗಿ, ಕೊನೆಗೆ ಆಕ್ರಾಮಕ ಸ್ಪರ್ಧಿಯನ್ನು ಬಿಗ್ ಬಾಸ್ ಮನೆಯಿಂದ ಹೊರಗಟ್ಟುವುದು; ಬಿಗ್ ಬಾಸ್ ಮನೆಯಲ್ಲಿ ಇರಲಾಗದೆ ಸ್ಪರ್ಧಿಗಳು ಅದರ ಸುತ್ತಲೂ ಇರುವ ಗೋಡೆ ಹಾರಿ ಓಡಿ ಹೋಗುವುದು; ಖಿನ್ನತೆಗೆ ಒಳಗಾಗಿ, ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುವುದು; ಇತ್ಯಾದಿ ಪ್ರತಿ ಸೀಸನ್‌ನಲ್ಲಿಯೂ ಘಟಿಸುತ್ತವೆ.

ಈ ನೆಲೆಯಲ್ಲಿ ಕನ್ನಡ ಆವೃತ್ತಿಯನ್ನು ನಾವು ಮೆಚ್ಚಬೇಕು. ಕನ್ನಡದ ಬಿಗ್ ಬಾಸ್ ಕಾರ್ಯಕ್ರಮಗಳಲ್ಲಿ ಹಿಂಸೆ ಇಲ್ಲವೇ ಇಲ್ಲ ಎಂದಲ್ಲ ಒಂದು ಸೀಸನ್‌ನಲ್ಲಿ ನಟಿಯೊಬ್ಬಳು ಕೆಳಗೆ ಬಿದ್ದು ಅವಳ ಮೇಲೆ ಇತರರು ಬಿದ್ದು ಆ ನಟಿಯ ಬೆನ್ನುಮೂಳೆಗೆ ಅಪಾಯವಾಗಿತ್ತು; ಈಗ ತಾನೆ ಮುಗಿದ ಶೋನಲ್ಲಿ ನಟಿಯೊಬ್ಬಳ ಕೈಬೆರಳುಗಳು ಮುರಿದು ಅವಳು ಹೊರಹೋಗುವಾಗಲೂ ತನ್ನ ಬೆರಳುಗಳಿಗೆ ಬ್ಯಾಂಡೇಜ್ ಕಟ್ಟಿಕೊಂಡೇ ಇದ್ದಳು. ಆದರೆ, ಇವೆಲ್ಲವೂ ಆಕಸ್ಮಿಕವಾಗಿ ಆದ ಘಟನೆಗಳು. ಕಳೆದ ಎಂಟು ಸೀಸನ್‌ಗಳಲ್ಲಿ (ನನಗೆ ಗೊತ್ತಿರುವಂತೆ) ಒಂದು ಬಾರಿ ಮಾತ್ರ ಸ್ಪರ್ಧಿಯೊಬ್ಬನು ಮತ್ತೊಬ್ಬನನ್ನು ಹೊಡೆದು ಗಾಯಗೊಳಿಸಿದನು; ಅವನು ಕೂಡಲೇ ಹೊರಹಾಕಲ್ಪಟ್ಟನು.

ಆದರೆ, ಬಿಗ್ ಬಾಸ್ ಕಾರ್ಯಕ್ರಮ ಹಣ, ಹಿಂಸೆ, ಹೊಡೆದಾಟ ಇಷ್ಟೇ ಅಲ್ಲ ಕನಿಷ್ಠ ಪಕ್ಷ ಕನ್ನಡ ಆವೃತ್ತಿಯಲ್ಲಿ.



ಬಿಗ್‌ಬಾಸ್ ಖ್ಯಾತಿಯ ಶೈನ್ ಶೆಟ್ಟಿ ಮತ್ತು ವಾಸುಕಿ ವೈಭವ್ ಫೋಟೊ: ಇರ್ಷಾದ್ ಮಹಮ್ಮದ್

ಇದರಲ್ಲಿ ಸಕಾರಾತ್ಮಕ ಅಂಶಗಳೂ ಸಾಕಷ್ಟಿವೆ.

ಮೊದಲಿಗೆ, ಅನೇಕ ಯುವಕಯುವತಿಯರಿಗೆ ತಮ್ಮಲ್ಲಿರುವ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಬಿಗ್ ಬಾಸ್ ಕಾರ್ಯಕ್ರಮ ಉತ್ತಮ ಅವಕಾಶವನ್ನು ಕೊಡುತ್ತದೆ ಲಕ್ಷಾಂತರ ಪ್ರೇಕ್ಷಕರಿಗೆ ಕಾಣಿಸಿಕೊಂಡು ಆ ಮೂಲಕ ಪ್ರಸಿದ್ಧರಾಗಿ, ತಮ್ಮಲ್ಲಿರುವ ಪ್ರತಿಭೆಯಿಂದ ವಾಸ್ತವ ಜಗತ್ತಿನಲ್ಲಿ ಒಳ್ಳೆಯ ಬದುಕು ಕಟ್ಟಿಕೊಳ್ಳಲು ಅನುವಾಗುತ್ತದೆ. ಇಂದು ಕನ್ನಡ ದೃಶ್ಯ ಮಾಧ್ಯಮದಲ್ಲಿ ತಮ್ಮ ವಾಕ್ಪಟುತ್ವದಿಂದ ಮಿಂಚುತ್ತಿರುವ ಹೆಚ್ಚಿನ ನಿರೂಪಕನಿರೂಪಕಿಯರು ಬಿಗ್ ಬಾಸ್ ಕಾರ್ಯಕ್ರಮದಲ್ಲಿ ಗೆದ್ದವರು ಅಥವಾ ಗೆಲುವಿನ ಹತ್ತಿರ ಬಂದವರು (ಸೃಜನ್ ಲೋಕೇಶ್, ಅಕುಲ್ ಬಾಲಾಜಿ, ನಿರಂಜನ್, ಅನುಶ್ರೀ, ಅನುಪಮಾ, ಇತ್ಯಾದಿ). ಹಾಗೆಯೇ, ವಾಸುಕಿ ವೈಭವ್, ಚಂದನ್ ಶೆಟ್ಟಿ, ವಿಶ್ವನಾಥ್ ಮುಂತಾದ ಯುವ ಗಾಯಕ ಗಾಯಕಿಯರಿಗೆ ಪ್ರಸಿದ್ಧಿಯ ಬಾಗಿಲನ್ನು ತೆರೆದುದು ಬಿಗ್ ಬಾಸ್ ಕಾರ್ಯಕ್ರಮ. ಬಡ, ಗ್ರಾಮೀಣ ಪರಿಸರದಿಂದ ಬಂದ, ಮಂಜು ಅಂತಹವರ ಸಮಯಸ್ಫೂರ್ತಿ, ಅಗಾಧ ಹಾಸ್ಯಪ್ರಜ್ಞೆ, ಹಾಗೂ ಸ್ನೇಹಪರ ನಡವಳಿಕೆ ಇಡೀ ಕರ್ನಾಟಕಕ್ಕೆ ತಿಳಿದುದು ಬಿಗ್ ಬಾಸ್ ಮೂಲಕವೇ. ಅರ್ಥಾತ್, ಎಲ್ಲರೂ ಕಾಣುವ 'ಸಿಂಡ್ರೆಲಾ' ಕನಸನ್ನು ಕೆಲವರಿಗಾದರೂ ವಾಸ್ತವಗೊಳಿಸುವ ಮಹಾಮಾಯಿ ಬಿಗ್ ಬಾಸ್.

ಮತ್ತೊಂದು ನೆಲೆಯಲ್ಲಿ, ಜನರ ನೆನಪಿನಿಂದ ಮರೆಯಾದ (ಶಂಕರ್ ಅಶ್ವಥ್, ಚಂದ್ರಕಲಾ ಮೋಹನ್, ಇತ್ಯಾದಿ) ಅನೇಕ ಮಧ್ಯವಯಸ್ಕ ಕಲಾವಿದರಿಗೆ ಮತ್ತೆ ದೊಡ್ಡ ವೇದಿಕೆಯಲ್ಲಿ ಕಾಣಿಸಿಕೊಳ್ಳುವ, ಆ ಮೂಲಕ ಸ್ವಲ್ಪವಾದರೂ ಖ್ಯಾತಿಆತ್ಮವಿಶ್ವಾಸಗಳನ್ನು ಗಳಿಸಿಕೊಳ್ಳುವ ಅವಕಾಶವನ್ನು ಬಿಗ್ ಬಾಸ್ ನೀಡುತ್ತದೆ.

ಸಂಕ್ಷಿಪ್ತವಾಗಿ ಹೇಳಬೇಕಾದರೆ, ಬಿಗ್ ಬಾಸ್ ಮನೆ ಒಂದು ಅಜ್ಞಾತ, ನಿರ್ಜನ ದ್ವೀಪ. ಹತ್ತಿಪ್ಪತ್ತು ಅಪರಿಚಿತರು ಅಲ್ಲಿಗೆ ಅಕಸ್ಮಾತ್ತಾಗಿ ಬಂದು, ಅಲ್ಲಿಯೇ ಕೆಲ ಕಾಲ ಉಳಿಯಬೇಕಾದಾಗ ಹೊರ ಜಗತ್ತಿನ ಕುಲಜಾತಿಗಳು, ಸ್ಥಾನಮಾನಗಳು, ತೊಟ್ಟ ವೇಷಭೂಷಣಗಳು ಯಾವುದೂ ಉಪಯೋಗಕ್ಕೆ ಬರುವುದಿಲ್ಲ. ಸ್ವಸಾಮರ್ಥ್ಯದಿಂದ ಮಾತ್ರ ಅವರುಗಳು ಬದುಕಬೇಕಾಗುತ್ತದೆ. ಅಂತಹವರಲ್ಲಿ, ಪ್ರತಿಭಾವಂತರಿಗೆ ಆತ್ಮವಿಶ್ವಾಸವನ್ನು ಕಟ್ಟಿಕೊಟ್ಟು ಅವರನ್ನು ಬೆಳೆಸುವ, ತಮಗೆಲ್ಲಾ ಗೊತ್ತಿದೆ ಎಂದು ಬೀಗುವವರ ಅಹಂಗೆ ಪೆಟ್ಟುಕೊಟ್ಟು ಅವರ ವರ್ತನೆಯನ್ನು ತಿದ್ದುವ, ಅಪರಿಚಿತರೊಡನೆ ಬೆರೆಯುವ ಸಾಮಾಜಿಕ ಪ್ರಜ್ಞೆಯನ್ನು ಹುಟ್ಟುಹಾಕುವ ಶಕ್ತಿ ಅಂತಹ ದ್ವೀಪಗಳಿಗೆ ಇರುತ್ತದೆ. (ಇದೇ ಆಶಯವನ್ನಿಟ್ಟುಕೊಂಡು, ಜೇಮ್ಸ್ ಬ್ಯಾರಿ ಎಂಬ ನಾಟಕಕಾರ The Admi rable Crichton ಎಂಬ ಪ್ರಸಿದ್ಧ ನಾಟಕವನ್ನು ಬರೆದಿದ್ದಾನೆ.)

ಈ ಬಗೆಯ ಕಾರ್ಯಕ್ರಮಗಳು ಇನ್ನೂ ಹೆಚ್ಚು ಸೃಜನಶೀಲವಾಗಬೇಕಾದರೆ, ಆಯ್ಕೆಯಾಗುವ ಸ್ಪರ್ಧಿಗಳು ಇನ್ನೂ ವೈವಿಧ್ಯಪೂರ್ಣ ಕ್ಷೇತ್ರಗಳಿಂದ ಬಂದವರಾಗಬೇಕು; ಕನಿಷ್ಠ ಪಕ್ಷ ಮೂರು ವಾರಗಳಾದರೂ ಪ್ರತಿಯೊಬ್ಬ ಸ್ಪರ್ಧಿಯೂ ಬಿಗ್ ಬಾಸ್ ಮನೆಯಲ್ಲಿದ್ದು ತನ್ನ ಶಕ್ತಿ ಸಾಮರ್ಥ್ಯಗಳನ್ನು ತೋರಿಸುವ ಅವಕಾಶವಿರಬೇಕು; ಮತ್ತು ದೈಹಿಕ ಸಾಮರ್ಥ್ಯವನ್ನು ಬೇಡುವ ಟಾಸ್ಕ್‌ಗಳು ಕಮ್ಮಿಯಾಗಬೇಕು (ಕಾರಣ, ಅಂತಹವುಗಳಲ್ಲಿ ಮಹಿಳೆಯರು ಗೆಲ್ಲುವ ಅವಕಾಶ ಅತ್ಯಲ್ಪ ಮತ್ತು ಅವುಗಳಿಂದ ದೀರ್ಘಕಾಲೀನ ಅಪಾಯಗಳಾಗಬಹುದು); ಹಾಗೂ ವಾರಕ್ಕೊಮ್ಮೆಯಾದರೂ ಕನ್ನಡ ಭಾಷೆಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿರಬೇಕು. ವಾಹಿನಿಗೆ ಹಣಜಾಹೀರಾತುಗಳು ಅವಶ್ಯಕ, ಆದರೆ ಆ ಕಾರ್ಯಕ್ರಮದ ಗುರಿ ಹಣವೊಂದೇ ಆಗಬಾರದು.

ಲೇಖಕರು ಹಿರಿಯ ವಿಮರ್ಶಕರು.

ಪ್ರತಿಕ್ರಿಯಿಸಿ: feedback@sudha.co.in